# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೋಟಗಾರಿಕೆ ಇಲಾಖೆಯ ಮಾಹಿತಿ ಹಕ್ಕು ಕಾಯ್ದೆ 2005 ರ ಅಡಿಯಲ್ಲಿ ಅನುಸರಿಸುವ ಸಾಮಾನ್ಯ ಕ್ರಮಗಳು.

## (STANDARD PROCEDURE)

<u>**ಕೇಂದ್ರ ಕಛೇರಿ:**</u>

ಪಾಲಿಕೆಯ ತೋಟಗಾರಿಕೆ ವಿಭಾಗದ ಕೇಂದ್ರ ಕಛೇರಿಯ ಎಲ್ಲಾ ಜವಾಬ್ದಾರಿಗಳನ್ನು ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ನಿರ್ವಹಿಸುತ್ತಿರುತ್ತಾರೆ. ಇವರು ತೋಟಗಾರಿಕಾ ವಿಭಾಗದಲ್ಲಿನ ವಲಯ ಮಟ್ಟದಲ್ಲಿರುವ ತೋಟಗಾರಿಕೆ ಅಧೀಕ್ಷಕರು ಪೂರ್ವ, ಪಶ್ಚಿಮ, ದಕ್ಷಿಣ–1, ದಕ್ಷಿಣ–2, ಮಹದೇವಪುರ, ಯಲಹಂಕ, ಬೊಮ್ಮನಹಳ್ಳಿ, ದಾಸರಹಳ್ಳಿ ಹಾಗೂ ರಾಜರಾಜೇಶ್ವರೀನಗರ ರವರುಗಳಿಗೆ ಮುಖ್ಯಸ್ಥರಾಗಿರುತ್ತಾರೆ.

ವಲಯ ಮಟ್ಟದಲ್ಲಿ ತೋಟಗಾರಿಕೆ ಅಧೀಕ್ಷಕರುಗಳು ಕಛೇರಿಯ ಮುಖ್ಯಸ್ಥರಾಗಿದ್ದು, ಬಟವಾಡೆ ಅಧಿಕಾರಿಗಳಾಗಿರುತ್ತಾರೆ. ತೋಟಗಾರಿಕಾ ಅಧೀಕ್ಷಕರ ಅಡಿಯಲ್ಲಿ ಸಹಾಯಕ ತೋಟಗಾರಿಕೆ ಅಧೀಕ್ಷಕರು, ತೋಟಗಾರಿಕೆ ನಿರೀಕ್ಷಕರು, ಸಸ್ಯಾಭಿವೃಧಿಗಾರರು, ಮೇಸ್ತ್ರಿಗಳು ಮತ್ತು ತೋಟಗಾರರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ವಲಯ ಮಟ್ಟದ ತೋಟಗಾರಿಕಾ ಅಧೀಕ್ಷಕರ ಕಛೇರಿಯ ಆಡಳಿತ ವ್ಯವಸ್ಥೆಯಲ್ಲಿ ಕಛೇರಿ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು, ನಾಲ್ಕನೇ ದರ್ಜೆ ಸಹಾಯಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ತೋಟಗಾರಿಕೆ ಇಲಾಖೆಯ ಉದ್ಯಾನವನಗಳ ಭೂವಿನ್ಯಾಸ ಕಾಮಗಾರಿ ಉದ್ಯಾನವನಗಳ ನಿರ್ವಹಣೆ ಮತ್ತು ಕೊಳವೆ ಬಾವಿಗಳ ದುರಸ್ಥಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳನ್ನು ತೋಟಗಾರಿಕೆ ಅಧೀಕ್ಷಕರುಗಳು ವಲಯ ಮಟ್ಟದಲ್ಲಿ ನಿರ್ವಹಿಸುತ್ತಿರುತ್ತಾರೆ. ಈ ಕಾಮಗಾರಿ ಟೆಂಡರ್‌ಗಳನ್ನು ನಡೆಸಲು ಅವಶ್ಯಕವಿರುವ ಅಂದಾಜು ಪಟ್ಟಿಗಳನ್ನು ಆಯಾ ತೋಟಗಾರಿಕೆ ನಿರೀಕ್ಷಕರು ಅಥವಾ ಸಹಾಯಕ ತೋಟಗಾರಿಕೆ ಅಧೀಕ್ಷಕರು ತಯಾರಿಸಿ ತೋಟಗಾರಿಕೆ ಅಧೀಕ್ಷಕರುಗಳ ಸಹಿಯೊಂದಿಗೆ ಆಡಳಿತಾತ್ಮಕ ಅನುಮೋದನೆಗೆ ವಲಯ ಜಂಟಿ/ ಅಪರ ಆಯುಕ್ತರುಗಳಿಗೆ ಸಲ್ಲಿಸುತ್ತಾರೆ. ಈ ರೀತಿ ಆಡಳಿತಾತ್ಮಕ ಅನುಮೋದನೆ ಪಡೆದ ಕಾಮಗಾರಿಗಳಿಗೆ ತಾಂತ್ರಿಕ ಅನುಮೋದನೆಯನ್ನು ವಲಯದ ಮುಖ್ಯ ಅಭಿಯಂತರರು/ ಅಧೀಕ್ಷಕ ಅಭಿಯಂತರರು ಅಥವಾ ಕೇಂದ್ರ ಕಛೇರಿಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವರಿಂದ ಪಡೆದು ಟೆಂಡರ್ ಪ್ರಕ್ರಿಯೆಯನ್ನು KTPP ಕಾಯ್ದೆ 1999ರ ಅನ್ವಯ ನಡೆಸಲಾಗುವುದು.

ಟೆಂಡರ್‌ಗಳನ್ನು ಆಯಾ ವಲಯದ ಸಹಾಯಕ ಹಣಕಾಸು ನಿಯಂತ್ರಕರು ರವರ ಸಮ್ಮುಖದಲ್ಲಿ ತೆರೆದ ನಂತರ ಟೆಂಡರ್ ಅಂಗೀಕಾರ ಪ್ರಾಧಿಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲಾಗುವುದು. ಈ ಪ್ರಾಧಿಕಾರದ ಅಧ್ಯಕ್ಷತೆಯನ್ನು ಜಂಟಿ/ ಅಪರ ಆಯುಕ್ತರು ವಹಿಸುತ್ತಾರೆ, ಮುಖ್ಯ ಅಭಿಯಂತರರು ಸದಸ್ಯರಾಗಿರುತ್ತಾರೆ. ಈ ಪ್ರಾಧಿಕಾರದ Convenor ಆಗಿ ತೋಟಗಾರಿಕೆ ಅಧೀಕ್ಷಕರು ರವರು ಕಾರ್ಯ ನಿರ್ವಹಿಸುತ್ತಾ ಯಶಸ್ವಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗುವುದು.

ಇದರೊಂದಿಗೆ ಆಯಾ ವಲಯಗಳ ವ್ಯಾಪ್ತಿಯಲ್ಲಿನ ಮೀಡಿಯನ್‌ಗಳು, ಟ್ರಾಫಿಕ್ ಐಲ್ಯಾಂಡ್‌ಗಳು, ಬುಲೇವಾರ್ಡ್‌ಗಳು, ವೃತ್ತಗಳ ಅಭಿವೃದ್ಧಿಗೊಳಿಸುವುದು ಮತ್ತು ನಿರ್ವಹಿಸುವುದು.

ಈ ಮೇಲೆ ತಿಳಿಸಿರುವ ಎಲ್ಲಾ ಕಾಮಗಾರಿಗಳನ್ನು ಟೆಂಡರ್ ಮಾಡುವ ಮುನ್ನ ಆಯಾ ವರ್ಷಗಳಲ್ಲಿ ಆಯವ್ಯಯಕ್ಕೆ ಅನುಗುಣವಾಗಿ ತೋಟಗಾರಿಕಾ ಕಾರ್ಯಕ್ರಮ ಪಟ್ಟಿ ತಯಾರಿಸಿ ಸಂಬಂಧಿಸಿದ ವಲಯ ಅಪರ/ಜಂಟಿ ಆಯುಕ್ತರ ಶಿಫಾರಸ್ಸಿನೊಂದಿಗೆ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ಮಾನ್ಯ ಆಯುಕ್ತರ ಒಪ್ಪಿಗೆ ಪಡೆದು ತೋಟಗಾರಿಕೆ ಸ್ಥಾಯಿ ಸಮಿತಿಗೆ ಮಂಡಿಸಿ ಅನುಮೋದನೆ ಪಡೆಯಲಾಗುವುದು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 1170 ಉದ್ಯಾನವನಗಳಿದ್ದು ಈಗಾಗಲೇ 937 ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸಿ ಸಾರ್ವಜನಿಕರ ಉಪಯೋಗಕ್ಕೆ ವಿನಿಯೋಗಿಸಿದೆ. ಉಳಿಕೆ 233 ಉದ್ಯಾನವನಗಳನ್ನು ಮುಂಬರುವ ದಿನಗಳಲ್ಲಿ ಹಂತಹಂತವಾಗಿ ವೃಕ್ಷವನಗಳನ್ನಾಗಿ (Tree Park) ಅಭಿವೃದ್ಧಿ ಪಡಿಸಲಾಗುವುದು.

ಅಭಿವೃದ್ಧಿ ಹೊಂದಿದ 937 ಉದ್ಯಾನವನಗಳ ನಿರ್ವಹಣೆಯನ್ನು ಖಾಸಗಿ ಹೊರ ಗುತ್ತಿಗೆ, ಇಲಾಖಾ ತೋಟಗಾರರ ಮುಖಾಂತರ ಹಾಗೂ ದತ್ತು ಆಧಾರದ ಮೇಲೆ ಸಂಘ ಸಂಸ್ಥೆಗಳು ಹಾಗೂ ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘದವರು (RWA) ಗಳಿಂದ ಸಹ ನಿರ್ವಹಣೆ ಮಾಡಲಾಗುತ್ತಿದೆ.

ತೋಟಗಾರಿಕೆಗೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು/ ನಿರ್ವಹಣೆ ಕಾಮಗಾರಿಗಳನ್ನು ಆಯಾ ತೋಟಗಾರಿಕೆ ಅಧೀಕ್ಷಕರುಗಳು ನಿರ್ವಹಿಸುವುದನ್ನು ಆಯಾ ವಲಯ ಜಂಟಿ ಆಯುಕ್ತರ ಮಾರ್ಗದರ್ಶನದೊಂದಿಗೆ ಮತ್ತು ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿರವರ ನೇತೃತ್ವದಲ್ಲಿ ತೋಟಗಾರಿಕೆ ಸ್ಥಾಯಿ ಸಮಿತಿಯು ಕಾಲಕಾಲಕ್ಕೆ ಸಭೆಗಳಲ್ಲಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ.

ಆಯಾ ವಲಯಗಳ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರು ಪ್ರಥಮ ಹಂತದಲ್ಲಿ ಉದ್ಯಾನವನಗಳ ಅಭಿವೃದ್ಧಿಗಾಗಿ ಸ್ಥಳಗಳನ್ನು ಗುರುತಿಸಿ ಗಡಿಗಳನ್ನು ದೃಢಪಡಿಸಿಕೊಂಡು ಚೈನ್‌ಲಿಂಕ್ ತಂತಿ ಬೇಲಿ ಅಳವಡಿಸಿ, ಪಾದಚಾರಿ ಮಾರ್ಗ ನಿರ್ಮಿಸುವುದು, ಗೆಜೆಬೊ ನಿರ್ಮಾಣ, ಬೆಂಚುಗಳು, ಕೊಳವೆ ಬಾವಿ ಕೊರೆಯುವುದು ಹಾಗೂ ಇನ್ನಿತರೆ ಸಿವಿಲ್ ಕಾಮಗಾರಿಗಳನ್ನು ನಿರ್ಮಿಸಿ ತೋಟಗಾರಿಕೆ ಅಧೀಕ್ಷಕರು ರವರಿಗೆ ಹಸ್ತಾಂತರಿಸಲಾಗುವುದು.

ಉದ್ಯಾನವನಗಳಲ್ಲಿನ ವಿದ್ಯುತ್ ದೀಪಗಳನ್ನು ಅಳವಡಿಸುವುದು ಹಾಗೂ ನಿರ್ವಹಣೆಯನ್ನು ಆಯಾ ವಲಯದ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರು ನಿರ್ವಹಿಸುತ್ತಿರುತ್ತಾರೆ.

ತೋಟಗಾರಿಕೆ ಅಧೀಕ್ಷಕರುಗಳ ಅಧೀನ ಸಿಬ್ಬಂದಿಯ ವೇತನ ಬಟವಾಡೆ, ಇತರೆ ಅನ್ವಯ ಭತ್ಯಗಳೂ, ರಜೆ ಮಂಜೂರಾತಿ, ಮತ್ತು ಸಂಬಂಧಿಸಿದ ಇತರೆ ಆಡಳಿತಾತ್ಮಕ ನಿರ್ವಹಣೆಯ ಜವಾಬ್ದಾರಿ ಹೊಂದಿರುತ್ತಾರೆ.

ಚುನಾಯಿತ ಪ್ರತಿನಿಧಿಗಳ ನಿರಂತರ ಸಂಪರ್ಕದಲ್ಲಿ ಸರ್ಕಾರಿ ಕಾರ್ಯಕ್ರಮಗಳು ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಅಲಂಕಾರಿಕ ಕುಂಡಗಳನ್ನು ಜೋಡಿಸುವುದು, ತಳಿರು ತೋರಣ ವ್ಯವಸ್ಥೆಯನ್ನು ನಿರ್ವಹಿಸುವುದು.

ಪ್ರತಿ ವರ್ಷ ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಲಾಲ್‌ಬಾಗ್‌ನಲ್ಲಿ ನಡೆಯುವ ಫಲಪುಷ್ಪ ಪ್ರದರ್ಶನದ ಅಂಗವಾಗಿ ಬಿಬಿಎಂಪಿ ವತಿಯಿಂದ ಪಾಲ್ಗೊಂಡು ಅನೇಕ ಪ್ರಶಸ್ತಿಗಳನ್ನು ಪಡೆಯಲಾಗುತ್ತಿದೆ.

ವಲಯ ಮಟ್ಟದ ಅಧಿಕಾರಿಗಳಾದ ತೋಟಗಾರಿಕೆ ಅಧೀಕ್ಷಕರುಗಳು ಮಾನ್ಯ ಆಯುಕ್ತರ, ಅಪರ/ಜಂಟಿ ಆಯುಕ್ತರ, ಸ್ಥಾಯಿ ಸಮಿತಿಯ, ಮಾನ್ಯ ವಿಧಾನ ಸಭಾ ಸದಸ್ಯರುಗಳ, ಮಾನ್ಯ ಪಾಲಿಕೆಯ ಇತರೆ ಸ್ಥಾಯಿ ಸಮಿತಿಯ ಸಭೆಗಳು ಮತ್ತು ಪರಿವೀಕ್ಷಣಾ ಕಾರ್ಯಗಳಲ್ಲಿ ಭಾಗವಹಿಸುವುದು. ಸಾರ್ವಜನಿಕರ ದೂರುಗಳನ್ನು ಪರಿಶೀಲಿಸುವುದು. ವಲಯ ಮಟ್ಟದಲ್ಲಿ ಸಾರ್ವಜನಿಕ ಮಾಹಿತಿ ಹಕ್ಕು ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವುದು, ಹಾಗೂ ಕಾಲಕಾಲಕ್ಕೆ ಮೇಲಧಿಕಾರಿಗಳು ನೀಡುವ ಸೂಚನೆಗಳನ್ನು ಪಾಲಿಸುವುದು.